# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 451 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.03.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (1) | (2) | (3) |
| ಅ) | ರಾಜ್ಯದಲ್ಲಿ ಈ ವರ್ಷ ಬೇಸಿಗೆ ಪ್ರಾರಂಭಕ್ಕೂ ಮುನ್ನವೇ ಮಕ್ಕಳು ಸೇರಿದಂತೆ ಸಾರ್ವಜನಿಕರಲ್ಲಿ ತೀವ್ರ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಆರೋಗ್ಯ ಸಮಸ್ಯೆಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು; | ಹವಾಮಾನ ಬದಲಾವಣೆ ಹಾಗೂ ಮಾನವನ ಆರೋಗ್ಯ ಕುರಿತ ರಾಷ್ಟ್ರೀಯ ಕಾರ್ಯಕ್ರಮದ ಮಾರ್ಗಸೂಚಿಗಳ ಅನ್ವಯ ತಾಪಮಾನ ಏರಿಕೆಯಿಂದ ಮಕ್ಕಳು ಹಾಗೂ ಸಾರ್ವಜನಿಕರಲ್ಲಿ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳ ನಿರ್ವಹಣೆ ಹಾಗೂ ಪರಿಹಾರಕ್ಕೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ:-<br><br>1. Heat Related Illness ಕುರಿತ ದತ್ತಾಂಶವನ್ನು ಎಲ್ಲಾ ಸರ್ಕಾರಿ ಆರೋಗ್ಯ ಸಂಸ್ಥೆಗಳಿಂದ Integrated Health Information Portal (IHIP) ನಲ್ಲಿ ವರದಿಯನ್ನು ಪಡೆಯಲಾಗುತ್ತಿದೆ.<br><br>2. Heat Related Illness ವರದಿ ಸಲ್ಲಿಕೆ ಕುರಿತಂತೆ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ ರಾಜ್ಯ ಮಟ್ಟದಿಂದ ತರಬೇತಿ ನೀಡಲಾಗಿದೆ ಹಾಗೂ ಅದರಂತೆ ಎಲ್ಲಾ ವೈದ್ಯಾಧಿಕಾರಿಗಳಿಗೆ ಜಿಲ್ಲಾ ಮಟ್ಟದಿಂದ ತರಬೇತಿಯನ್ನು ನೀಡಲಾಗಿದೆ.<br><br>3. ಸದರಿ ವರದಿಗಳಲ್ಲಿ ತಾಪದಿಂದ ಬಳಲಿಕೆ (Heat exhaustion) ಹಾಗೂ ತಾಪಾಘಾತದಿಂದ (Sun stroke) ಆಸ್ಪತ್ರೆಗೆ ದಾಖಲಾಗುವವರ ಸಂಪೂರ್ಣ ವಿವರಗಳು ಮತ್ತು ಚಿಕಿತ್ಸೆ, ನಿರ್ವಹಣೆಯ ವಿವರಗಳು ಲಭ್ಯವಿರುತ್ತದೆ **(ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ)**.<br><br>4. ಅದರಂತೆ, ಈವರೆಗೆ ಗದಗ ಹಾಗೂ ಬೆಂಗಳೂರು ನಗರ (ಬಿ.ಬಿ.ಎಂ.ಪಿ. ವ್ಯಾಪ್ತಿ) ಜಿಲ್ಲೆಗಳಲ್ಲಿ ತಾಪದ ಬಳಲಿಕೆಯಿಂದಾಗಿ ತಲಾ ಒಂದು ಪ್ರಕರಣವು ವರದಿಯಾಗಿದ್ದು, ಈ ಎರಡೂ ಪ್ರಕರಣಗಳೂ ಗುಣಮುಖವಾಗಿವೆ **(ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ)**. |

| (1) | (2) | (3) |
|---|---|---|
| | | 5. ತಾಪಮಾನದ ಏರಿಕೆಯಿಂದ ಉಂಟಾಗಬಹುದಾದ ಆರೋಗ್ಯ ಸಮಸ್ಯೆಗಳ ನಿರ್ವಹಣೆಗಾಗಿ ಅಗತ್ಯ ಸೌಲಭ್ಯಗಳೊಂದಿಗೆ (ಮಾರ್ಗಸೂಚಿಯ ಅನ್ವಯ) ಜಿಲ್ಲಾಸ್ಪತ್ರೆ (5 ಬೆಡ್ ಗಳು) ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ (2 ಬೆಡ್ ಗಳು) ತಾಪಾಘಾತ ನಿರ್ವಹಣಾ ಕೊಠಡಿಗಳು (Heat Stroke Management Room) 1ನೇ ಮಾರ್ಚ್ ನಿಂದ 31ನೇ ಜುಲೈವರೆಗೆ ಕ್ರಿಯಾತ್ಮಕವಾಗಿವೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ORS Corner ಗಳನ್ನು ಸ್ಥಾಪಿಸಲಾಗಿದೆ.<br><br>6. ಪ್ರಸ್ತುತ, ಬೇಸಿಗೆ ಕಾಲದಲ್ಲಿ ಉಂಟಾಗುವ ಆರೋಗ್ಯ ಸಮಸ್ಯೆಗಳಿಂದ ರಕ್ಷಿಸಿಕೊಳ್ಳಲು ಸಾರ್ವಜನಿಕರು ಮಾಡಬೇಕಾದ್ದು / ಮಾಡಬಾರದ (Dos & Donts) ಅಂಶಗಳ ಕುರಿತು ಸಾರ್ವಜನಿಕ ಸಲಹಾ ಪತ್ರವನ್ನು ಹೊರಡಿಸಲಾಗಿದೆ.<br><br>7. ಬೇಸಿಗೆಯ ತಾಪಮಾನದಿಂದ ರಕ್ಷಿಸಿಕೊಳ್ಳುವ ವಿಧಾನಗಳ ಕುರಿತು ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಲಾಗಿದ್ದು, ಅದರಂತೆ ಕ್ಷೇತ್ರ ಭೇಟಿಯ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅಗತ್ಯ ಆರೋಗ್ಯ ಶಿಕ್ಷಣ ಮತ್ತು ವರ್ತನೆ ಬದಲಾವಣೆ (IEC & BCC) ಸಂವಹನವನ್ನು ನೀಡುತ್ತಿದ್ದಾರೆ.<br><br>8. Heat Related Illness ಕುರಿತ ವರದಿ ಸಲ್ಲಿಕೆ ಹಾಗೂ ದತ್ತಾಂಶದ ಮಾಹಿತಿಯನ್ನು ಕಾಲಕಾಲಕ್ಕೆ ವಿಶ್ಲೇಷಿಸಿ ಅಗತ್ಯ ಸಲಹೆ ಸೂಚನೆಗಳನ್ನು ಸಂಬಂಧಪಟ್ಟವರಿಗೆ ರಾಜ್ಯ ಕಾರ್ಯಕ್ರಮ ವಿಭಾಗದಿಂದ ನೀಡಲಾಗುತ್ತಿದೆ. |
| ಇ) | ರಾಜ್ಯದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅವಶ್ಯವಿರುವ ಔಷಧಿ ದಾಸ್ತಾನುಗಳನ್ನು ಸಂಗ್ರಹಿಸಲಾಗಿದೆಯೇ? | ಬೇಸಿಗೆ ಕಾಲದಲ್ಲಿ ತಾಪದಿಂದ ಬಳಲಿಕೆ (Heat exhaustion) ಹಾಗೂ ತಾಪಾಘಾತ (Sun stroke) ಪ್ರಕರಣ ನಿರ್ವಹಣೆ ಮತ್ತು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆ ಹಾಗೂ ತಾಲ್ಲೂಕು ಆಸ್ಪತ್ರೆಗಳ ತಾಪಾಘಾತ ನಿರ್ವಹಣಾ ಕೊಠಡಿಗಳಲ್ಲಿ ಅಗತ್ಯ ಔಷಧಿ ಹಾಗೂ ಸೌಲಭ್ಯಗಳು ಲಭ್ಯವಿದೆ. |

**ಆಕುಕ 48 ಎಸ್‌ಎಂಎಂ 2025**

( ದಿನೇಶ್ ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಸಚಿವರು

| #SN. | Patient Id | Name of reporting health facility | State of reporting facility | District of reporting health | Age | Gender | State | District | Sub District | Village | Pin code | Condition at arrival | Last Occupation | Socio Economic Card | Heatstroke Confirmed | Was the deceased found | Provisional diagnosis |
|---|---|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |

| Date of onset | Admission type OPD/IPD | Date of Emergency visit | H/O Heat exposure | Improved after cooling | Outcome type | Outcome Date | Date of death | Time of death | Place of death | State | District | Confirmation of death | Investigation form submitted | Tmax | Tmin | Relative Humidity (8:30am) | Uploaded Forms |
|---|---|---|---|---|---|---|---|---|---|---|---|---|---|---|---|---|---|
| 19 | 20 | 21 | 22 | 23 | 24 | 25 | 26 | 27 | 28 | 29 | 30 | 31 | 32 | 33 | 34 | 35 | 36 |

ರಾಜ್ಯ ನೋಡಲ್ ಅಧಿಕಾರಿ,
ಹವಾಮಾನ ಬದಲಾವಣೆ ಹಾಗೂ ಮಾನವನ ಆರೋಗ್ಯ
ಆರೋಗ್ಯ ಮತ್ತು ಕು.ಕಲ್ಯಾಣ ಸೇವೆಗಳ ನಿರ್ದೇಶನಾಲಯ
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು – 560 023



File No. HFW/48/SMM/2025-HEALTH 1-HEALTH AND FAMILY WELFARE SEC (Computer No. 1711792)
Generated from eOffice by SATISH BAGAPPA HANGARAGI, HFW-ASST2(SBH) HEALTH1, ASSISTANT, HEALTH AND FAMILY WELFARE SEC on 17/03/2025 04:

ಅನುಬಂಧ - 2

[redacted]

| #SN | Patient Id | Name of reporting health | District of reporting health | Age | Gender | Sub District | Village | Condition at arrival | Last Occupation | Provisional diagnosis | Date of onset | Admission type OPD/IPD | Date of Emergency visit | Improved after cooling |
|---|---|---|---|---|---|---|---|---|---|---|---|---|---|---|
| 1 | 21833081 | Shirol | Gadag | 35 | Female | Nargund | Shirol | Recoverred | Farmer/fisherman/miner/gardener | Heatstroke (Suspected) | 05-03-2025 | OPD | 05 03-2025 | Yes |
| 2 | 21913367 | MURPHY TOWN UPHC | Bengaluru Urban | 26 | Male | Bengaluru East | Murphy town | Recoverred | Postman/delivery person/gig worker/drivers | Heatstroke (Suspected) | 12-03-2025 | OPD | 12 03-2025 | Yes |

ರಾಜ್ಯ ಸರ್ವೇಕ್ಷಣಾ ಅಧಿಕಾರಿ
[illegible]
[illegible]
ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು - 560 023